ADFACTORS PR
Knowledge-driven communications

| Published Date: | 8 Aug 2018 | Publication: | Sanjevani (Kannada) |
|---|---|---|---|
| Edition: | Bangalore | Page No: | 2 |
| MAV/CCM: | 37570/37.57 | Circulation: | 100000 |

# ಟಿಸಿಎಸ್ ಐಟಿ ಕ್ವಿಜ್ ಸ್ಪರ್ಧೆ

ಬೆಂಗಳೂರು, ಆ. 8– ಟಿಸಿಎಸ್ ಐಟಿ ವಿಜ್, ಭಾರತದ ಅತಿದೊಡ್ಡ ಅಂತರ ಶಾಲೆ ರಸಪ್ರಶ್ನೆ ಸ್ಪರ್ಧೆ ಯಾಗಿದ್ದು, ಪ್ರಮುಖ ಐಟಿ ಸೇವಾ ಸಂಸ್ಥೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಆಯೋಜಿಸಿತ್ತು. ಸ್ಪರ್ಧೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬೆಂಗಳೂರಿನ ವಿವಿಧ ಶಾಲೆಗಳಿಂದ 1000 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಂಗಳೂರಿನ ವಯ್ಯಾಲಿಕಾವಲ್‌ನ ಚೌಡಯ್ಯ ಸ್ಮಾರಕ ಭವನದಲ್ಲಿ ಸ್ಪರ್ಧೆ ನಡೆಯಿತು.

ತಾಂತ್ರಿಕ ಕೌಶಲ ಉತ್ತಮಪಡಿಸುವ ಗುರಿಯೊಂದಿಗೆ ಆರಂಭವಾದ ಕಠಿಣ ಸ್ಪರ್ಧೆಯುಳ ವಾರ್ಷಿಕ ಜ್ಞಾನಾಧಾರಿತ ಸ್ಪರ್ಧೆ 8 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಪ್ರತಿಯೊಂದು ಶಾಲೆಯೂ ಇಬ್ಬರು ಸದಸ್ಯರಿರುವ ತಂಡಗಳನ್ನು ಕಳುಹಿಸಲು ಅವಕಾಶವಿತ್ತು.

ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕ ಇರಲಿಲ್ಲ. ಟಿಸಿಎಸ್ ಐಟಿ ಕ್ವಿಜ್ ಸ್ಪರ್ಧೆಯು ತಾಂತ್ರಿಕ ಕೌಶಲ ಉತ್ತಮಪಡಿಸುವ ಗುರಿಯನ್ನು ಹೊಂದಿದ್ದು, ಸಭಿಕರು ಮತ್ತು ಸ್ಪರ್ಧಿಗಳಲ್ಲಿ ಕಡೆಯವರೆಗೂ ಕುತೂಹಲ ಮೂಡಿಸಿತ್ತು. ಒಟ್ಟು ಐದು ಸುತ್ತುಗಳಿದ್ದವು. ಮಾಸ್ ಪರ್ಸನಲಿಸೇಷನ್, ಲೆವೆರೇಜಿಕ್ ಎಕೊಸಿಸ್ಟಮ್, ಕ್ರಿಯೇಟಿಂಗ್ ಎಕ್ಸ್ಪೋನೆನ್ಷಿಯಲ್ ವ್ಯಾಲ್ಯೂ ಮತ್ತು ಎಂಬ್ರೇಸಿಂಗ್ ರಿಸ್ಕ್ ವಲಯದಲ್ಲಿ ಇದು ನಡೆಯಿತು. ಇದರ ಜೊತೆಗೆ ವಿಶೇಷ ಸುತ್ತಾಗಿ ಟಿಸಿಎಸ್@50 ನಡೆಯಿತು.

ಕ್ವಿಜ್‌ನಲ್ಲಿ ಜಾಗತಿಕವಾಗಿ ಪ್ರವರ್ಧಮಾನಕ್ಕೆ ಬಂದಿರುವ ವಿವಿಧ ತಾಂತ್ರಿಕ ಬೆಳವಣಿಗೆಗಳು ಇದ್ದವು. ಲಿಖಿತ ಪರೀಕ್ಷೆಯಲ್ಲಿ ಉನ್ನತ ಆರು ಸ್ಥಾನಗಳಿಸಿದ ಉನ್ನತ ಆರು ತಂಡಗಳು ಪ್ರಾದೇಶಿಕ ಹಂತದ ಸ್ಪರ್ಧೆಗೆ ಆಯ್ಕೆಯಾದವು. ಪ್ರಾದೇಶಿಕ ಸುತ್ತಿನ ಅಂತಿಮ ಸ್ಪರ್ಧೆಯಲ್ಲಿ ಐದು ಸುತ್ತಿನ ಸ್ಪರ್ಧೆಗಳ ನಂತರ ಸೇಂಟ್ ಪಾಲ್ ಇಂಗ್ಲಿಷ್ ಶಾಲೆಯಿಂದ ಸುಚ್ಚಿತ್ ಹೆಗ್ಡೆ ಮತ್ತು ರಾಜಶಂಕರ್ ಅವರು ಪ್ರಶಸ್ತಿಯನ್ನು ಗೆದ್ದುಕೊಂಡರು. ಟಿಸಿಎಸ್ ಬೆಂಗಳೂರಿನ ಉಪಾಧ್ಯಕ್ಷ ಮತ್ತು ಅಧ್ಯಕ್ಷ ನಾಗರಾಜ್ ಇಜಾರಿ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು.

1/1